## 9

# ಸ್ತ್ರೀಯರ ಯಥಾರ್ಥವಾದ ಪಾತ್ರ

ಸ್ತ್ರೀಯರ ಸುತ್ತಲು ಉದ್ವೇಗದ ಪರಿಸರವು ಇರುವದರಿಂದ, ಇಂಥ ಒಂದು ಸಮಾಜದಲ್ಲಿ ದೈವಶಾಸ್ತ್ರದ ಪ್ರಕಾರ, ಸ್ತ್ರೀಯರ ದೃಷ್ಟಿಕೋನವನ್ನು ಕಾಪಾಡುವದು ಕಷ್ಟವಾಗುತ್ತದೆ. ಸ್ತ್ರೀಯರು, "ಬಲಹೀನವಾದ ಪಾತ್ರೆಗಳು" (1 ಪೇತ್ರ 3:7), ಎಂದು ತಿಳಿದಿದ್ದರೂ ಸಹ, ಅವರು ಪುರುಷರಿಗಿರುವಂತಹ ಧೈರ್ಯದ ಬಲವನ್ನು ಹೊಂದಿರುವದಿಲ್ಲ, ಆದಾಗ್ಯೂ ಸ್ತ್ರೀಯರು ಪುರುಷರಿಗಿಂತ ಕೆಳಮಟ್ಟದವರಾಗಿರುವ ದಿಲ್ಲ. ಪೇತ್ರನ ಈ ವ್ಯಾಖ್ಯಾನವು ಸ್ತ್ರೀಯರನ್ನು ಕಳಂಕವುಳ್ಳವರು ಎಂಬುದಾಗಿ ತಿಳಿಸಲು ಬರೆಯುತ್ತಿರುವದಿಲ್ಲ, ಅಥವಾ ಅವರನ್ನು ನಿಂದಿಸಿ, ಅವರ ಮೇಲೆ ದೈಹೀಕ ವಾದ ಬಲವನ್ನು ಉಪಯೋಗಿಸುತ್ತಿಲ್ಲ.

### ವ್ಯತ್ಯಾಸಗಳು

ಸಂಸ್ಕೃತಿಯು, ಸ್ತ್ರೀಯರನ್ನು "ಬಲಹೀನವಾದ" ಪಾತ್ರೆಗಳನ್ನಾಗಿ ಮಾಡುವದಿಲ್ಲ. ದೇವರು ಅವರನ್ನು ಉಂಟುಮಾಡಿದಾಗ, ಅವರನ್ನು ದೈಹೀಕವಾದ ವ್ಯತ್ಯಾಸದಿಂದ ಉಂಟುಮಾಡಲು ನಿರ್ದರಿಸಿದನು, ಮತ್ತು ಅವರನ್ನು ಆದಾಮ ಮತ್ತು ಹವ್ವಳೆಂದು ನಿರ್ಮಿಸಿದನು. ಯಾಕೆಂದರೆ ದೇವರು ಅವರಿಗೆ ವಿವಿಧವಾದ ಪಾತ್ರವನ್ನು ನೇಮಿಸಿದ್ದರಿಂದ, ದೇವರು ಅವರಿಗೆ ನೇಮಿಸಿದ ಪಾತ್ರವನ್ನು ನೆರವೇರಿಸುವಂತೆ ಅವರನ್ನು ಸ್ತ್ರೀ ಪುರುಷರನ್ನಾಗಿ ನಿರ್ಮಿಸಿದನು. ಒಂದು ವೇಳೆ ಸಮಾಜವು ಅವರ ಪಾತ್ರವನ್ನು ಬದಲಾಯಿಸಲು ಪ್ರಯತ್ನಿಸಬಹುದು; ಹೇಗೂ, ಅವರ ಶರೀರವು ಬೇರೆ ಬೇರೆ ರೀತಿಯಲ್ಲಿ ನಿರ್ಮಾಣವಾಗಿರುವದರಿಂದ, ಕೆಲವು ಪಾತ್ರಗಳು ಸ್ತ್ರೀಯರಿಗೂ ಮತ್ತು ಕೆಲವು ಪಾತ್ರಗಳು ಪುರುಷರಿಗೂ ನಿರ್ದಿಷ್ಟವಾಗಿ ನೀಡಲಾಗಿದೆ. ಕೆಲವು ಕಾರ್ಯಗಳು ಪುರುಷರಿಗೆ ಮಾತ್ರ ಮೀಸಲು. ಇನ್ನೂ ಕೆಲವು ಪಾತ್ರಗಳು ಸ್ತ್ರೀಯರಿಗೆ ಮಾತ್ರ ಮೀಸಲಾಗಿದೆ, ಕೆಲವು ಪಾತ್ರಗಳು ಪರಸ್ಪರರಿಗೂ ಮೀಸಲಾಗಿರುತ್ತದೆ, ಅವರು ಬೇರೆ ಬೇರೆ ರೀತಿ ಯಲ್ಲಿ ಕಾರ್ಯನಿರ್ವಹಿಸಬೇಕೆಂಬ ಉದ್ದೇಶದಿಂದ, ದೇವರು ಅವರನ್ನು ನಿರ್ಮಿಸಿ, ಅವರು ತಮಗೆ ನೇಮಿಸಿರುವ ಪಾತ್ರವನ್ನು ವಯಕ್ತಿಕವಾಗಿ ಮಾಡಬೇಕೆಂದು ಬಯಸಿದನು.

ಸ್ಥಾನಮಾನ ಮತ್ತು ವ್ಯತ್ಯಾಸಗಳು, ಅವರನ್ನು ಮೇಲ್ಮಟ್ಟಕ್ಕಾಗಲಿ, ಅಥವಾ ಕೆಳಮಟ್ಟಕ್ಕಾಗಲಿ ನಡೆಸುವದಿಲ್ಲ. ನಾಗರೀಕರು ತಾವು ಇರುವಂತ ಸ್ಥಳದ ಆಡಳಿತಕ್ಕೆ ಅಧೀನರಾಗಬೇಕು (ರೋಮಾಪುರ 13:1-5; 1 ಪೇತ್ರ 2:13), ಗುಲಾಮರು ತಮ್ಮ ಯಜಮಾನರಿಗೆ ಅಧೀನರಾ ಗಬೇಕು (ತೀತ 2:9), ಸಭಾ ಸದಸ್ಯರು ತಮ್ಮ ನಾಯಕರಿಗೆ ಅಧೀನರಾಗಬೇಕು (ಇಬ್ರಿಯ 13:17), ಮಕ್ಕಳು ತಮ್ಮ ಅಪೋಷಕರಿಗೆ ಅಧೀನರಾಗಬೇಕು (ಎಫೆಸ 6:1) ಒಂದು ವೇಳೆ ಕಾರ್ಯಕ್ಷಮತೆಯಲ್ಲಿ ಬಲವುಳ್ಳವರು ಮತ್ತು ಜ್ಞಾನದಲ್ಲಿ ಹೆಚ್ಚಿನವರು ಆಗಿದ್ದರು. ಅವರ ಮೇಲಿ ರುವ ಅಧಿಕಾರಕ್ಕೆ ಅಧೀನರಾಗ ಬೇಕು, ಮಾನವೀಯ ಸಂಬಂಧಗಳಲ್ಲಿ ನಾವು ಅಧೀನರಾ ಗಿರಬೇಕೆಂಬುದೆ ಬೈಬಲ್‌ನ ಧ್ಯೇಯವಾಗಿರುತ್ತದೆ.

ಅಪ್ಪಣೆ ನೀಡುವದಕ್ಕಿಂತಲೂ, ಅಧೀನಕ್ಕೆ ಒಳಗಾಗುವದು ಬಹಳ ಕಷ್ಟಕರವಾಗಿರುತ್ತದೆ, ಅಪ್ಪಣೆ ನೀಡುವವನಿಗಿಂತಲೂ, ಅಧೀನಕ್ಕೆ ಒಳಗಾಗುವವನಿಗೆ, ಹೆಚ್ಚಿನ ಹತೋಟಿಯ ಅವಶ್ಯವಿರುತ್ತದೆ. ಇನ್ನೊಬ್ಬನು ಅಂದರೆ ವಿಶೇಷ ಬಲವಿಲ್ಲದವನು, ಭಾವನೆ ಇಲ್ಲದವನೂ ಜ್ಞಾನಿ ಅಥವಾ ವರದಾನಗಳಿಲ್ಲದ, ನಿಮ್ಮ ಮೇಲಿನ ಅಧಿಕಾರಿಗೆ, ಅಧೀನರಾಗಲು ವಿಶೇಷ ವಾದ ಚಿತ್ತವು ಅವಶ್ಯವಿರುತ್ತದೆ.

## ಕ್ರಿಸ್ತನಲ್ಲಿ ಎಲ್ಲರೂ ಒಂದೇ ಆಗಿರುತ್ತಾರೆ

ಯೇಸುವಿನ ದೇಹದಲ್ಲಿ ಸದಸ್ಯರಾಗಿರುವ ಸ್ತ್ರೀಯರು ಅಧೀನಕ್ಕೆ ಒಳಪಡುವ ಜವಾಬ್ದಾರಿಯು, ಸ್ತ್ರೀಯರಲ್ಲಿ ಇರುವದಿಲ್ಲ ಎಂದು ಹೇಳುವವರಿಗಾಗಿ ಒಂದು ಆಶ್ರಯದ ಬುರುಜು ಉಂಟು ಗಲಾತ್ಯ 3:28: "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ ಗಂಡು ಹೆಣ್ಣು ಎಂದೂ ಭೇಧವಿಲ್ಲ" ಕೆಲವರು ಹೇಳುವಂತೆ, ಎಲ್ಲಾ ಕ್ರೈಸ್ತರು ಸಮನಾದ ಆತ್ಮೀಕ ಪಾತ್ರಗಳನ್ನು ಹೊಂದಿರುತ್ತಾರೆ.

ಎಲ್ಲಾ ಕ್ರೈಸ್ತರು ಒಂದೇ ವಿಧವಾದ ವರದಾನಗಳನ್ನು ಹೊಂದಿರಲಿಲ್ಲ, ದೇವರ ಆತ್ಮನ ಚಿತ್ತದ ಪ್ರಕಾರ ಅವರವರಿಗೆ ತಕ್ಕ ವರದಾನಗಳನ್ನು ಹಂಚಲಾಯಿತು (1 ಕೊರಿಂಥ 12:11). ಪೌಲನು ಹೇಳಿದ್ದು, ಎಲ್ಲರು ಆತನ ದೇಹವಾಗುವದಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದಾರೆ, ಅವರು "ಯೆಹೊದ್ಯರಾಗಿರಬಹುದು, ಗ್ರೀಕರಾಗಿರಬಹುದು, ದಾಸರು ಅಥವಾ ಸ್ವತಂತ್ರರಾಗಿರಬಹುದು" (1 ಕೊರಿಂಥ 12:13ಬಿ). ಇದನ್ನು ಮಾನವರ ದೇಹದ ದೃಷ್ಟಾಂತದಿಂದ, ಪೌಲನು ನಿರೂಪಿಸುತ್ತಿದ್ದಾನೆ. ದೇಹವು ವಿವಿಧವಾದ ಅಂಗಗಳನ್ನು ಹೊಂದಿರುತ್ತದೆ. ಆ ಅಂಗಗಳಿಗೆ ನಿರ್ದಿಷ್ಟವಾದ ಕಾರ್ಯಗಳಿರುತ್ತವೆ, ಕ್ರಿಸ್ತನ ದೇಹವು ಸಹ ಅದೇ ರೀತಿಯಾಗಿರುತ್ತದೆ (1 ಕೊರಿಂಥ 12:15-22). ಪೌಲನು ಕೇಳುವದೇನೆಂದರೆ, "ಎಲ್ಲರೂ ಅಪೊಸ್ತಲರಾಗಿದ್ದಾರೆಯೋ? ಎಲ್ಲರೂ ಪ್ರವಾದಿಗಳಾಗಿದ್ದಾರೆಯೋ? ಎಲ್ಲರೂ ಬೋಧಕರಾಗಿದ್ದಾರೆಯೋ? ಎಲ್ಲರೂ ಮಹತ್ಕಾರ್ಯಗಳನ್ನು ಮಾಡುವವರೋ?" (1 ಕೊರಿಂಥ 12:29). ಕ್ರಿಸ್ತನಲ್ಲಿ ಒಂದೇ ಆಗಿರುವ ಮಾತ್ರಕ್ಕೆ, ಎಲ್ಲರ ಕಾರ್ಯತಂತ್ರಗಳು, ಅಥವಾ ಜವಾಬ್ದಾರಿ, ಅಧಿಕಾರವು ಒಂದೇ ಆಗಿರುವದಿಲ್ಲ.

ಅಪೊಸ್ತಲರು ಸಭೆಯಲ್ಲಿ ತಮ್ಮ ಅಧಿಕಾರವನ್ನು ಉಳಿಸಿಕೊಂಡರು (1 ಥೆಸಲೋನಿಕ 2:6), ಎಲ್ಲಾ ಕ್ರೈಸ್ತರು ಒಂದೇ ಆಗಿರಬಹುದು. ಎಲ್ಲರೂ ಒಂದೇ ಆಗಿದ್ದ ಮಾತ್ರಕ್ಕೆ ಸಭೆಯಲ್ಲಿದ್ದವರೆಲ್ಲರಿಗೂ, ಅಪೊಸ್ತಲರಿಗಿದ್ದಂತಹ, ಅಧಿಕಾರವು ಇತ್ತು ಎಂಬುದಾಗಿ ಇರುವದಿಲ್ಲ. ಗುಲಾಮನ ಮೇಲೆ ಯಜಮಾನನ ಅಧಿಕಾರವು ಮುಂದುವರಿಯಿತು (ತೀತ 2:9), ಅವರಿಬ್ಬರು ಕರ್ತನಲ್ಲಿ ಇದ್ದರೂ ಸಹ ಸ್ತ್ರೀ ಪುರುಷರಿಬ್ಬರು ತಮ್ಮ ನಾಯಕರಿಗೆ, ಅಧೀನರಾಗಬೇಕು (ಇಬ್ರಿಯ 13:17). ಹೆಂಡತಿಯರು ಗಂಡಂದಿರಿಗೆ ಅಧೀನರಾಗಬೇಕು (ಎಫೆಸ 5:24), ಸಭೆಯಲ್ಲಿ ಸ್ತ್ರೀಯರು ತಮ್ಮ ನಾಯಕರಿಗೆ, ಅಧೀನವಾಗಬೇಕು (1 ತಿಮೊಥೆ 2:11). ಕ್ರಿಸ್ತನಲ್ಲಿ ಎಲ್ಲರೂ ಒಂದೇ ಆಗಿರುವ ಮಾತ್ರಕ್ಕೆ, ಎಲ್ಲರೂ ಅಧಿಕಾರದ ಸ್ಥಾನಮಾನ ಹೊಂದಿರುವರು ಎಂಬುದಾಗಿ ಇರುವದಿಲ್ಲ.

ಒಂದು ವೇಳೆ, ಯಜಮಾನನು ತನ್ನ ಗುಲಾಮನಿಗೆ ಅಧೀನ ಪಡಿಸಿಕೊಳ್ಳದಿದ್ದರೆ ಇದರ ನಿಮಿತ್ತ ಯಜಮಾನನು, ಹಿರಿಯನಾಗುವದು ಅಸಾಧ್ಯ ಎಂಬುದಾಗಿ ಹೇಳುವಾಗ,ಆ ಯಜಮಾನನಿಗೆ ಉಂಟಾಗುವ ವೇದನೆಯ ಕುರಿತು, ಊಹೆಮಾಡಿಕೊಳ್ಳಿರಿ. ಮತ್ತು ಒಂದು ವೇಳೆ ಅವನು ಈ ನಿಮಿತ್ತ ಹಿರಿಯನಾಗುವದಕ್ಕೆ ಯೋಗ್ಯನಾದರೆ, ಈ ಸಂಬಂಧದಲ್ಲಿ, ಯಜಮಾನನು ಸ್ವಚಿತ್ತದಿಂದ ತನ್ನ ಗುಲಾಮನಿಗೆ, ಅಧೀನವಾಗ ಬೇಕಾಗುತ್ತದೆ. ಈ ಕಾರ್ಯವು ಯಜಮಾನನ ವಿಶೇಷ ಸದ್ಗುಣವನ್ನು ತೋರಿಸುತ್ತದೆ. ಮತ್ತು ಅವರ ಹೊರಗಿನ ಆತ್ಮಿಕ ಸಂಬಂಧದ ವ್ಯತ್ಯಾಸಗಳನ್ನು ಹೊರತು ಪಡಿಸುತ್ತದೆ. ಕೆಲವು ಸ್ತ್ರೀಯರು ತಮಗಿಂತಲೂ, ಕಡಿಮೆ ಯೋಗ್ಯತೆ ಇರುವವರಿಗೆ, ಅಧೀನವಾಗುವಾಗ, ಇದೇ ರೀತಿಯ ಅನುಭವವನ್ನು ಅನುಭವಿಸುತ್ತಾರೆ. ಇಂಥ ಸಮಯದಲ್ಲಿ ತಮ್ಮ ದೀನವಾದ ಅಧೀನತೆಯ ಮೂಲಕ, ದೇವರಿಗೆ ಚಿತ್ತಕ್ಕೆ ಸನ್ಮಾನವನ್ನು ತೋರ್ಪಡಿಸುವ ಮೂಲಕ ತಮ್ಮ ಮಹತ್ವವನ್ನು ತೋರಿಸುತ್ತಾರೆ. ಗಂಡು ಅಥವಾ ಹೆಣ್ಣುಗಳನ್ನು, ಒಳಗೊಂಡಿರುವ ಸಕಲ ಕ್ರೈಸ್ತರು, ದೇವರ ಏರ್ಪಾಟುಗಳನ್ನು ಒಪ್ಪಿಕೊಳ್ಳಲೇಬೇಕು.

ಸ್ತ್ರೀಯರಿಗೆ ನಾಯಕತ್ವದ ಮಾನ್ಯತೆ ನೀಡಬೇಕೆಂದು ತಿಳಿಯುವವರು, ಯೋಚಿಸ

ಬೇಕಾದ ಸಂಗತಿ ಏನೆಂದರೆ, ಒಂದು ವೇಳೆ ಸ್ತ್ರೀಯರಿಗೆ ಅಧಿಕಾರ ನೀಡುವುದಾದರೆ, ಅವರಿಗೆ ಅಧೀನರಾಗುವವರು ಯಾರು? ಮಕ್ಕಳು ಮಾತ್ರವಲ್ಲವೇ?ಇದರಲ್ಲಿ ಸ್ತ್ರೀಯರು ಸೇರಿಸಲ್ಪಟ್ಟು, ಪುರುಷರು ತೆಗೆಯಲ್ಪಟ್ಟಿದ್ದಾರೆಯೇ? ಒಂದು ವೇಳೆ ಸ್ತ್ರೀಯರಿಗೆ ಅಧಿಕಾರವು ನೀಡಲ್ಪಟ್ಟರೆ, ಇತರ ಸ್ತ್ರೀಯರು ಅಧೀನಕ್ಕೆ ಒಳಗಾಗಬೇಕು. ಎಲ್ಲರಿಗೂ ಅಧಿಕಾರ ದೊರೆಯುವದಿಲ್ಲ. ಇತರರು ನಾಯಕತ್ವಕ್ಕೆ ಒಳಗಾಗದ ಹೊರತು, ಮತ್ತು ಮೇಲ್ವಿಚಾರಣೆಗೆ, ಅಧೀನರಾಗದ ಹೊರತು, ಯಾವುದೇ ಗುಂಪಿಗು ಯಶಸ್ಸಿನ ಏರ್ಪಾಟು ಮಾಡಲು ಅಸಾಧ್ಯವಾಗುತ್ತದೆ (ಇಬ್ರಿಯ 13:17). ಕ್ರಿಸ್ತನಲ್ಲಿ ನಾವೆಲ್ಲರು ಒಂದೇ ಆಗಿದ್ದರೂ, ನಮಗೆಲ್ಲರಿಗೆ ಒಂದೇ ಪಾತ್ರವಿರುವದಿಲ್ಲ. ಒಂದೇ ಆಗಿರುವದರಿಂದ, ಎಲ್ಲರು ಒಂದೇ ಸ್ಥಾನವನ್ನು ಕ್ರಿಸ್ತನಲ್ಲಿ ಹೊಂದಲಾರರು (1 ಕೊರಿಂಥ 12:4-31; ರೋಮಾಪುರ 12:6-8ನ್ನು ನೋಡಿರಿ; ಎಫೆಸ 4:11-13).

ಗಲಾತ್ಯ 3:28ರಲ್ಲಿ ಪೌಲನು ಏನು ತಿಳಿಸುತ್ತಿದ್ದಾನೆ? ಅವನು ಸರಳವಾಗಿ ಹೇಳಿ, ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡವರೆಲ್ಲರು ದೇವರ ಮಕ್ಕಳಾಗುವರು ಮತ್ತು ಅವರು ಒಂದೇ ದೇಹಕ್ಕೆ ಸೇರಿಕೊಳ್ಳುವರು. ದೀಕ್ಷಾಸ್ನಾನದ ಮೂಲಕ ಒಬ್ಬನು ಯೆಹೂದ್ಯ ಸಭೆಗೆ ಸದಸ್ಯನಾಗುವದಿಲ್ಲ ಮತ್ತು ಇನ್ನೊಬ್ಬನನ್ನು ಅನ್ಯ ಸಭೆಗೆ ಸದಸ್ಯನನ್ನಾಗಿಯೂ ಮಾಡುವದಿಲ್ಲ. ಮತ್ತೊಬ್ಬನನ್ನು ಸ್ವತಂತ್ರ ಸಭೆಯ ಸದಸ್ಯನನ್ನಾಗಿ ಮಾಡುವದಿಲ್ಲ. ಅಥವಾ ಒಬ್ಬನನ್ನು ಪುರುಷರ ಸಭೆಗಾಗಲೀ ಅಥವಾ ಇನ್ನೊಬ್ಬನನ್ನು ಸ್ತ್ರೀಯರ ಸಭೆಗೆ ಸದಸ್ಯರನ್ನಾಗಿ ಮಾಡುವದಿಲ್ಲ. ದೀಕ್ಷಾಸ್ನಾನವು ನಮ್ಮನ್ನು "ಒಂದೇಯಾಗಿ" ಮಾಡುತ್ತದೆ, - ಆ ದೇಹಕ್ಕೆ ಎಲ್ಲರನ್ನೂ ಸದಸ್ಯರನ್ನಾಗಿ ಮಾಡುತ್ತದೆ (ಗಲಾತ್ಯ 3:27; ರೋಮಾಪುರ 12:4, 5; ಕೊಲೊಸ್ಸೆ 3:11).

ಕ್ರಿಸ್ತನಲ್ಲಿ ನಮ್ಮ ಎಲ್ಲಾ ಗುರುತುಗಳ ವ್ಯತ್ಯಾಸಗಳು ಇರುತ್ತವೆ: ಗಂಡು ಮತ್ತು ಹೆಣ್ಣು ಅವುಗಳು ಗಂಡು ಹೆಣ್ಣಾಗಿಯೇ ಉಳಿಯುತ್ತವೆ; ಯಜಮಾನ ಮತ್ತು ದಾಸ ಅವರು ಯಜಮಾನ ಮತ್ತು ದಾಸರಾಗಿಯೇ ಉಳಿಯುತ್ತಾರೆ. ಯೆಹೂದ್ಯರು ಮತ್ತು ಅನ್ಯರು ಅವರು ಯೆಹೊದ್ಯರು ಮತ್ತು ಅನ್ಯರಾಗಿಯೇ ಉಳಿಯುತ್ತಾರೆ. ಈ ವ್ಯತ್ಯಾಸಗಳನ್ನು ಹೊಂದಿದವರಾಗಿ ನಾವು ಇರಲೇ ಬೇಕಾಗಿದ್ದರೂ, ಕ್ರಿಸ್ತನಲ್ಲಿರುವವರನ್ನೆಲ್ಲಾ ದೇವರು ಸಮಾನವಾಗಿ ಪ್ರೀತಿಸುತ್ತಾನೆ; ತನ್ನ ಪ್ರೀತಿಯಲ್ಲಿ ದೇವರು ತಾರತಮ್ಯವನ್ನು ಮಾಡುವದಿಲ್ಲ (ರೋಮಾಪುರ 2:6-11). ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಒಂದೇ ಪ್ರೀತಿಯನ್ನು ನೀಡಿದ್ದರೂ, ಅವರಿಗೆ ವಿಧವಿಧವಾದ ಜವಾಬ್ದಾರಿಗಳನ್ನು ನೀಡುವ ಪ್ರಕಾರ, ದೇವರು ತನ್ನ ಆತ್ಮೀಕ ಕುಟುಂಬದಲ್ಲಿ ಇದೇ ರೀತಿ ಮಾಡುವವನಾಗಿದ್ದಾನೆ. ನಾವು ಕ್ರಿಸ್ತನಲ್ಲಿ ಒಂದೇ ಆಗಿರುವ ಕಾರಣಕ್ಕಾಗಿ, ನಮ್ಮ ಪಾತ್ರಗಳು ಮತ್ತು ನಮ್ಮ ಯೋಗ್ಯತೆಗಳು ಬದಲಾಗುವದಿಲ್ಲ. ನಾವು ಕ್ರಿಸ್ತನಲ್ಲಿ ಒಂದೇ ಆಗಿರುವದರಿಂದ, ನಾವೆಲ್ಲರು ದೇವರ ಮಕ್ಕಳೆಂದು ನಿರ್ಣಯಿಸಲ್ಪಟ್ಟಿದ್ದೇವೆ, ಮತ್ತು ಒಂದೇ ಬಂಧನಕ್ಕೆ ಒಳಗಾಗಿದ್ದೇವೆ, ಮತ್ತು ವ್ಯತ್ಯಾಸಗಳ ಮಧ್ಯದಲ್ಲಿ ಐಕ್ಯತೆಯ ಸ್ಥಾನವನ್ನು ಹೊಂದಿ, ದೇವರೊಂದಿಗೆ ಒಂದೇ ಸಂಬಂಧವನ್ನು ಪಡೆಯುವೆವು.

## ಅಧೀನತೆ

ಅಧೀನತೆಗೆ ಒಳಗಾಗುವುದು ತಪ್ಪಾಗಿರುವುದೆ? ಅಧೀನತೆಯ ಕುರಿತು ಯೇಸು ನಮಗೆ ಮಾದರಿಯಾಗಿರುವನು ಯೇಸು ತನ್ನ ಅವಕಾಶಗಳನ್ನೆಲ್ಲ ತ್ಯಜಿಸಿ ತನ್ನನ್ನು ತಾನೇ ಅಧೀನಪಡಿಸಿಕೊಳ್ಳುವ ಮೂಲಕ ತಂದೆಗೆ ವಿಧೇಯನಾದನು (ಫಿಲಿಪ್ಪಿ 2:7, 8). ಯೇಸು ಹೊಂದಿದಂತ ಮನೋಭಾವನೆಯನ್ನೇ, ನಾವು ನಮ್ಮ ಮೇಲಿರುವ ಅಧಿಕಾರಕ್ಕೆ ಹೊಂದಿರಬೇಕು (ಫಿಲಿಪ್ಪಿ 2:5). ಆತನು ಅಧೀನತೆಯ ಮೂಲಕ ಅತ್ಯುನ್ನತ ಸ್ಥಾನಕ್ಕೆ ಏರಿದನು (ಫಿಲಿಪ್ಪಿ 2:9-11). ನಾವು ಅಧೀನರಾದರೆ, ನಾವು ಇದನ್ನೆ ಹೊಂದಬಹುದು.

ನಾಯಕತ್ವದ ಪಾತ್ರವನ್ನು ನೀಡದೆ ಇರುವದರಿಂದ, ಕೆಲವು ಸ್ತ್ರೀಯರ ಯೋಗ್ಯತೆ

ಗಳು ನಷ್ಟವಾಗುತ್ತವೆ ಎಂದು ಕೆಲವರ ಅನಿಸಿಕೆಯಾಗಿರುತ್ತದೆ. ಸ್ತ್ರೀಯರ ವರದಾನಗಳು ನಷ್ಟಪಡುವದಾದರೆ, ಅದು ಅವರು ಯಾವ ನಾಯಕತ್ವಕ್ಕೆ ಒಳಗಾಗಿರುತ್ತಾರೋ ಅವರ ತಪ್ಪಾಗಿರುತ್ತದೆ. ಒಳ್ಳೆಯ ನಾಯಕರು ತಮ್ಮ ಮೇಲ್ವಿಚಾರಣೆಯ ಕೆಳಗಿರುವ ಪ್ರತಿ ಸದಸ್ಯರ ವರದಾನಗಳನ್ನು ಗುರುತಿಸಿ, ಅದನ್ನು ಸದುಪಯೋಗಪಡಿಸಿಕೊಳ್ಳು ತ್ತಾರೆ. ಎಲ್ಲಾ ಒಳ್ಳೆಯ ಆಲೋಚನೆಗಳು ಪುರುಷರಿಂದಲೇ ಬರುವದಿಲ್ಲ. ವಿವೇಕಿಗಳಾದ ನಾಯಕರುಗಳು ಸಭೆಯ ಪ್ರತಿ ಸದಸ್ಯರ ಸಹಕಾರವನ್ನು ಉಪಯೋಗಿಸಿಕೊಳ್ಳುತ್ತಾರೆ.

ಸ್ತ್ರೀಯರಿಗೆ, ಪುರುಷರಿಗಿರುವ ಎಲ್ಲಾ ಹಕ್ಕು ಬಾದ್ಯತೆಗಳು ಇರುತ್ತವೆ, ಆದರೆ ಅವರು ದೇವ ಸಭೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು, ಅದರ ಮೇಲೆಯು, ದೇವ ಸಭೆಯ ಸಂತರ ಮೇಲೆಯೂ, ಅಧಿಕಾರ ನಡೆಸಕೂಡದು. ಈ ಜವಾಬ್ದಾರಿಯು ಪುರುಷರಿಗೆ ಮಾತ್ರ ನೀಡಲಾಗಿದೆ. ಅವರು ದೇವರ ಚಿತ್ತಕ್ಕೆ ಅಧೀನರಾಗಿ, ಪುರುಷರು ನಾಯಕರೆಂದು ತಿಳಿದು ಅವರೊಂದಿಗೆ ಸಹಕರಿಸಬೇಕು.

## ಸಂಸ್ಕೃತಿಯೋ ಅಥವಾ ಅಪ್ಪಣೆಯೋ

ಒಂದು ಪ್ರಾಮುಖ್ಯವಾದ ಪ್ರಶ್ನೆಯನ್ನು ಈಗಾಗಲೇ, ಉತ್ತರಿಸಿದ್ದರೂ, ಅದನ್ನು ಇನ್ನೊಮ್ಮೆ ಪರಿಷ್ಕರಿಸಬೇಕು. ಬೈಬಲಿನಲ್ಲಿ ಚಿತ್ರಿಸಿರುವ "ಸ್ತ್ರೀಯರ ಪಾತ್ರವು, ಅದು ಸುಮ್ಮನೆ ಸಂಸ್ಕೃತಿಗೆ ಸಂಬಂಧ ಪಟ್ಟಿದೆಯೋ ಅಥವಾ ಆ ಪಾತ್ರವು ದೇವರ ಯೋಜ ನೆಯಂತೆ ಇರುತ್ತದೋ?"

ಪರಸ್ಪರ ಗಂಡ/ಹೆಂಡತಿಯರ ಸಂಬಂಧ (ಎಫೆಸ 5:23, 24; ಕೊಲೊಸ್ಸೆ 3:18) ಮತ್ತು ಸಭೆಯಲ್ಲಿ ಸ್ತ್ರೀಯರ ಪಾತ್ರ (1 ಕೊರಿಂಥ 14:34) ಯಾವ ರೀತಿಯಲ್ಲಿ ಬೈಬಲ್‌ನಲ್ಲಿ ಚಿತ್ರಿಸಲಾಗಿದೆಯೋ ಅದನ್ನು ದೇವರೇ ಆ ರೀತಿಯಾಗಿ ಏರ್ಪಡಿಸಿದ್ದಾನೆ. ಅದು ಕೇವಲ ಸಂಸ್ಕೃತಿಯ ವಿಷಯಗಳಲ್ಲ. ಸ್ತ್ರೀಯು ಏದೇನ್ ತೋಟದಲ್ಲಿ ಮಾಡಿದ ಅಪರಾದದ ನಿಮಿತ್ತ, ದೇವರು ಅವಳನ್ನು ಪುರುಷರ ಅಧೀನಕ್ಕೆ ನಡಿಸಿದನು (ಆದಿಕಾಂಡ 3:16). ದೇವರು ಮನುಷ್ಯರನ್ನು ಉಂಟುಮಾಡಿದಾಗ, ದೇವರು ಪುರುಷನಿಗೆ ನೀಡಿದ ಅಧಿಕಾರದ ಆಧಾರದ ಮೇಲೆ, ಸ್ತ್ರೀಯು ಪುರುಷನ ನಾಯಕತ್ವಕ್ಕೆ ಸನ್ಮಾನವನ್ನು ನೀಡಿ, ದೇವರ ಈ ಏರ್ಪಾಟಿಗೆ ಅಧೀನರಾಗಬೇಕು ಎಂದು ಪೌಲನು ತಿಳಿಸುತ್ತಾನೆ (1 ಕೊರಿಂಥ 11:9; 1 ತಿಮೊಥೆ 2:13), ಯಾಕೆಂದರೆ ಹವ್ವಳು ಶೋಧನೆಗೆ ಒಳಗಾದಳು, ಆದಾಮನ ನಿಮಿತ್ತವಲ್ಲ (1 ತಿಮೊಥೆ 2:14). ಹಾಗೂ ಪೌಲನು ತಿಳಿಸಿದ್ದೇನೆಂದರೆ, ಸ್ತ್ರೀಯರ ಅಧೀನತೆಯ ಪಾತ್ರವು ಮೋಶೆಯ ಧರ್ಮಶಾಸ್ತ್ರದಂತೆಯೂ, ಹಾಗೂ ಯೇಸುವಿನ ಬೋಧನೆಯಂತೆಯು ಪರಸ್ಪರ ಹೊಂದಾಣಿಕೆಯಲ್ಲಿದ್ದವು (1 ಕೊರಿಂಥ 14:34, 37). ಪೇತ್ರನು ಇದನ್ನು ಬೈಬಲ್ ಪ್ರಾಮುಖ್ಯ ವ್ಯಕ್ತಿಗಳು, ದೇವರ ಚಿತ್ತವನ್ನು ನೆರವೇರಿಸಿದ್ದರಲ್ಲಿ ನಿರೂಪಣೆ ಮಾಡಿದ್ದರು ಎಂದು ತಿಳಿಸಿದ್ದಾನೆ (1 ಪೇತ್ರ 3:5, 6).

ಸಂಸ್ಕೃತಿಯಲ್ಲಿದ್ದ ಗಂಡ/ಹೆಂಡತಿಯರ ಪಾತ್ರವನ್ನಾಗಲೀ ಅಥವಾ ಸಭೆಯಲ್ಲಿ ಸ್ತ್ರೀಯರ ಕುರಿತ ಪಾತ್ರವೆಂಬುದಾಗಿಯಾಗಲೀ ಬೈಬಲ್ ನಿರ್ಣಯಿಸುವದಿಲ್ಲ. ಸ್ತ್ರೀಯರ ಪಾತ್ರಗಳನ್ನು ದೇವರ ಯೋಜನೆ ಹಾಗೂ ದೇವರ ನಿಯಮದ ಪ್ರಕಾರ ನಿರ್ಣಯಿಸಬೇಕೇ ವಿನಃ, ಸಮೂದಾಯದಲ್ಲಿ ಬದಲಾಗುವ ಸಂಪ್ರದಾಯದ ಪ್ರಕಾರ ನಿರ್ಣಯಿಸಬಾರದು. ಈ ಪ್ರಶ್ನೆಯು ಕುರಿತಾದ ಪ್ರತಿಯೊಂದು ಹೇಳಿಕೆಯು, ದೇವರು ನೀಡಿರುವ ಅಪ್ಪಣೆಯ ಆದಾರದ ಮೇಲೆ ನಿರ್ಣಯಿಸಲಾಗಿದೆ, ಇದು ದೇವರ ಸೃಷ್ಟಿಯ ರೀತಿಯಲ್ಲಿ ಬೋಧಿಸಲಾಗಿದೆ, ಅಥವಾ ಏದೇನ್ ತೋಟದಲ್ಲಿ ಉಂಟಾದ ಅಪರಾದದ ನಿಮಿತ್ತ ದೇವರ ಶಿಕ್ಷೆಯು ಉಂಟಾಯಿತು. ದೇವರು ತನ್ನ ಚಿತ್ತದ ಮೇರೆಗೆ ಇದನ್ನು ನಡಿಸುವವನಾಗಿದ್ದಾನೆ. ಸ್ತ್ರೀಯರು, ದೇವರ ಕ್ರಮಗಳನ್ನು ಸನ್ಮಾನಿಸುವದರಿಂದ, ಆಶೀರ್ವಾದದ ಫಲವನ್ನು ಪಡೆಯಬಹುದು ಅಥವಾ ದೇವರ ಚಿತ್ತಕ್ಕೆ ಅವಿಧೇಯರಾಗುವದರಿಂದ, ಅದರ ಪ್ರತಿಫಲವನ್ನು ಹೊಂದಬಹುದು. ಆಯ್ಕೆಯು ಸ್ತ್ರೀಯರಿಗೆ

ಸೇರಿದೆ.

ಸಂಸ್ಕೃತಿಗೆ ಅನುಗುಣವಾಗಿ, ಯೇಸುವಿನ ಬೋಧನೆಗಳನ್ನು ಮಾರ್ಪಡಿಸುವವರು, ಸರಳವಾಗಿ ಸಂಪ್ರದಾಯಗಳನ್ನು, ಪುರುಷರ ಮೇಲೆ ಹೊರಿಸುವರೇ ವಿನಃ ಯೇಸುವಿನ ಅಪ್ಪಣೆಗಳನ್ನು ಆತನ ಹಿಂಬಾಲಕರಿಗೆ ತಿಳಿಸುವದಿಲ್ಲ. ಯೇಸುವಿನ ಶಿಷ್ಯರು, ಯೇಸುವಿನ ಬೋಧನೆಗಳನ್ನೇ ಆಚರಿಸಬೇಕು (ಮತ್ತಾಯ 28:20). ಅವರು ಪ್ರಾಪಂಚಿಕ ಸಂಪ್ರದಾಯಗಳನ್ನು ಆಚರಿಸಬಾರದು: "ಇಹ ಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರ್ರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ" (ರೋಮಾಪುರ 12:2). ಸಂಸ್ಕೃತಿಯೇ ನಮ್ಮ ಧಾರ್ಮಿಕ, ನೈತಿಕ ಮತ್ತು ಆತ್ಮಿಕ ಸಂಗತಿಗಳಿಗೆ ಮಾತ್ರ ದರ್ಶನವೆಂದು ನಾವು ತಿಳಿದಿದ್ದರೆ, ನಾವು ತಪ್ಪಾದ ಗುರಿಯೆಡೆ ನೋಡುವವರಾಗಿದ್ದೇವೆ. ನಾವು ಯೇಸುವನ್ನೆ ನೋಡಬೇಕು. ಯಾಕೆಂದರೆ, "ನಂಬಿಕೆಯನ್ನು ಹಟ್ಟಿಸುವವನೂ ಮತ್ತು ಪೂರೈಸುವವನೂ ಆಗಿದ್ದಾನೆ" (ಇಬ್ರಿಯ 12:2).

ಈ ವಿಷಯದ ಕುರಿತ ಪ್ರಶ್ನೆಗಳ ಸಂಗತಿಗಳು "ಸಂಸ್ಕೃತಿಯಲ್ಲಿ ಯಾವ ರೀತಿಯಲ್ಲಿ ಒಪ್ಪಿಕೊಳ್ಳಬಹುದು? ಎಂಬುದರ ಮೇಲೆ ಅವಲಂಭಿತವಾಗದೆ, ದೇವರ ಚಿತ್ರದ ಮೇಲೆ ಅವಲಂಭಿತವಾಗದೆ, ದೇವರ ಚಿತ್ರದ ಮೇಲೆ ಅವಲಂಭಿಸಿರಬೇಕು?" ನಾವು ಈ ಪರಿಸ್ಥಿತಿಯನ್ನು ಈ ರೀತಿಯಾಗಿ ಮೌಲ್ಯ ಮಾಪನ ಮಾಡಿದ ನಂತರ, ಇದನ್ನು ದೇವರು ದೃಷ್ಟಿಸುವಂತ ರೀತಿಯಲ್ಲಿಯೂ, ಮತ್ತು ಯೇಸುವಿನ ಸೇವಕಿಯರಾಗಿ ಸ್ತ್ರೀಯರು ಕೈಗೊಳ್ಳಬೇಕಾದ, ಯಥಾರ್ಥವಾದ ಪಾತ್ರಗಳನ್ನು ತಿಳುಕೊಳ್ಳುತ್ತೇವೆ.

## ಮುಕ್ತಾಯ

ಈ ಜೀವಿತದಲ್ಲಿ ದೇವರ ಚಿತ್ತವನ್ನು ಉದ್ದೇಶವನ್ನೂ ನೆರವೇರಿಸುವದಕ್ಕೆ ಕಷ್ಟವಾಗ ಬಹುದು. ದೇವರು ಯಾಕೆ ಸ್ತ್ರೀ ಪುರುಷರನ್ನು ಉಂಟು ಮಾಡಿದನು, ಅಥವಾ ಆತನು ಅವರಿಗೆ ಯಾಕೆ ಈ ನಿರ್ದಿಷ್ಟವಾದ ಪಾತ್ರಗಳನ್ನು ನೀಡಿದನು ಎಂದು ಅರಿಯಲು ಕಷ್ಟ ವಾಗಬಹುದು. ದೇವರು ಅಪ್ಪಣೆ ನೀಡಿದಾಗ, ದೇವರ ಮನಸ್ಸಿನಲ್ಲಿ ಯಾವ ಸಂಗತಿ ಇತ್ತು ಎಂಬುದಾಗಿ ನಾವುಗಳು ಗ್ರಹಿಸುವ ಅವಶ್ಯವಿರುವದಿಲ್ಲ. ಅಪ್ಪಣೆಯನ್ನು ಕೊಟ್ಟ ದೇವರಲ್ಲಿ ವಿಶ್ವಾಸವನ್ನು ಇಟ್ಟುಕೊಳ್ಳುವುದು ಮತ್ತು ಆತನಿಗೆ ಹೃದಯಪೂರ್ವಕವಾಗಿ ವಿಧೇಯರಾ ಗುವುದು ಅವಶ್ಯಕವಾಗಿದೆ.

ದೇವರ ನಮೂನೆಯನ್ನು ಗೌರವಿಸುವುದು ಮತ್ತು ಅವರ ಆಜ್ಞೆಗಳಿಗೆ ವಿಧೇಯ ರಾಗುವುದು ಮಾತ್ರವೇ ನಮ್ಮ ಮುಖ್ಯ ವಿಷಯವಾಗಿದೆ. ದೇವರು ಯಾಕೆ ಆಜ್ಞೆಗಳನ್ನು ಕೊಟ್ಟನು ಎಂಬುದನ್ನು ಅರಿತುಕೊಳ್ಳಲು ತೀರ್ಮಾನಿಸದೇ ಇರೋಣ ಆದರೆ ದೇವರಿಗೆ ವಿಧೇಯತೆಯಿಂದ ಇರೋಣ (ಮತ್ತಾಯ 16:27; ರೋಮಾಪುರ 2:6; 1 ಪೇತ್ರ 1:17). ಈ ವಿಷಯದಲ್ಲಿ - ಮತ್ತು ಎಲ್ಲಾ ವಿಷಯಗಳಲ್ಲಿ, ದೇವರ ಚಿತ್ತಕ್ಕೆ ಯೇಸುವಿನಲ್ಲಿದ್ದಂತ ಮನೋ ಭಾವನೆಯನ್ನೇ ನಾವುಗಳು ಹೊಂದಿರಬೇಕು. "ನನ್ನ ಚಿತ್ತದಂತಾಗದೇ, ನಿನ್ನ ಚಿತ್ತದಂತೆಯೇ ಆಗಲಿ" (ಮತ್ತಾಯ 26:39ಬಿ; ಫಿಲಿಪ್ಪಿ 2:5).